ಅಧ್ಯಕ್ಷರು : ಇದು ದೊಡ್ಡ ಚರ್ಚೆಯ ರೀತಿಯಲ್ಲಿ ನಡೆಯುತ್ತಿದೆಯಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜವಾಹರ್ ರೋಜ್‌ಗಾರ್ ಯೋಜನೆಯೂ ಕೂಡ ಎಂಪ್ಲಾಯ್‌ಮೆಂಟ್ ಜನರೇಟಿಂಗ್ ಸ್ಕೀಮ್ ಎಲ್ಲೆಲ್ಲಿ ನಮ್ಮ ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನ ಮುಗಿದ ಮೇಲೆ ಎರಡನೇ ಫಂಡ್ ನಾವು ಜವಾಹರ್ ರೋಜ್‌ಗಾರ್ ಯೋಜನೆಯಿಂದ ಅಥವಾ ಬೇರೆ ಇಲಾಖೆಯಿಂದ ತೆಗೆದುಕೊಳ್ಳಬೇಕಾಗುತ್ತದೆ.

ರಾಜ್ಯದ ಜಿಲ್ಲಾ ಪುನರ್ ರಚನೆ ಬಗ್ಗೆ

1227 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಪುನರ್ ಜಿಲ್ಲಾ ರಚನೆ ಮಾಡುವ ಆಲೋಚನೆ ಇದೆಯೇ?*

ಆ) *ಹಾಗಿದ್ದಲ್ಲಿ ಗದ್ದೀಗೌಡ್ರ ಮತ್ತು ಹುಂದೇಕಾರ ಸಮುತಿಗಳು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಸರ್ಕಾರ ಅನುಷ್ಠಾನಕ್ಕೆ ತರುತ್ತದೆಯೇ?*

ಇ) *ಗದ್ದೀಗೌಡ್ರ ಮತ್ತು ಹುಂಡೇಕಾರ್ ಸಮಿತಿಯು ಕೊಪ್ಪಳ ಜಿಲ್ಲಾ ರಚನೆಯ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ?*

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು) :

ಅ) ಹೌದು

ಆ) ಪರಿಶೀಲನೆಯಲ್ಲಿದೆ

ಇ) ಇಲ್ಲ

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯದ ಜಿಲ್ಲಾ ಪುನರ್ ರಚನೆ ವಿಚಾರದಲ್ಲಿ ಅನೇಕ ಸಮಿತಿಗಳನ್ನು ರಚನೆ ಮಾಡಿದ್ದೀರಿ. ಸರಕಾರಕ್ಕೆ ಆ ಸಮಿತಿಗಳವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಈ ಸಮಿತಿಯ ವರದಿಗಳನ್ನು ಸರಕಾರದವರು ಒಪ್ಪಿಕೊಂಡಿದ್ದಾರೆಯೆ? ಎಕೆಂದರೆ ಜಿಲ್ಲಾ ಪುನರ್ ರಚನೆಯ ಮೂಲ ಉದ್ದೇಶವನ್ನು ನೀವು ಒಪ್ಪಿಕೊಂಡಿದ್ದೀರಿ. ಹಿಂದೆ ಕಂದಾಯ ಸಚಿವರಾಗಿದ್ದಾಗ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಶೀಘ್ರದಲ್ಲಿಯೇ ಇದನ್ನು ಮಾಡತಕ್ಕಂಥ ಒಂದು ಭರವಸೆಯನ್ನು ಈ ಸದನದ ಹೊರಗಡೆ ಮತ್ತು ಒಳಗಡೆ ಕೊಟ್ಟಿದ್ದರು. ಈಗ ಅದು ಸರಕಾರದ ಪರಿಶೀಲನೆಯಲ್ಲಿದೆ ಅಂದರೆ ಅದರ ಅರ್ಥವೇನು? ಜಿಲ್ಲಾ ಪುನರ್ ರಚನೆ ಮಾಡತಕ್ಕಂಥ ಎಷ್ಟು ಹೊಸ ಜಿಲ್ಲೆಗಳನ್ನು ಗುರುತಿಸಿದ್ದಾರೆ ಈ ಎರಡು ಸಮಿತಿಯವರು ಎಷ್ಟು ಹೊಸ ತಾಲ್ಲೂಕುಗಳನ್ನು ರಚಿಸ ಬೇಕೆಂದು ಶಿಫಾರಸ್ಸು ಮಾಡಿದ್ದಾರೆ? ಅದನ್ನು ಅನುಷ್ಠಾನಕ್ಕೆ ತರಲು ಇರುವ ತೊಂದರೆಗಳು ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ನಾನು ಈ ಕುರಿತು ಎರಡು ಮೂರು ಸಲ ಉತ್ತರವನ್ನು ಕೊಟ್ಟಿದ್ದೇನೆ. ಜಿಲ್ಲೆಗಳನ್ನು ಪುನರ್‌ರಚಿಸುವ ಬಗ್ಗೆ ಪರಿಶೀಲಿಸಲು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಲಾಗಿದೆ. ಅವರು ಈ ಬಗ್ಗೆ ಒಂದು ರಿಪೋರ್ಟ್ ಕ್ಯಾಬಿನೆಟ್‌ಗೆ ಕೊಡುತ್ತಾ ಇದ್ದಾರೆ. ಅದು ಸಚಿವಸಂಪುಟದ ಮುಂದೆ ಹೋದ ಮೇಲೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಹುಂಡೇಕಾರ್ ಮತ್ತು ಗದ್ದೀಗೌಡರ್ ಸಮಿತಿಯ ರಿಪೋರ್ಟ್ ಪ್ರಕಾರ ಸುಮಾರು 8 ಹೊಸ ಜಿಲ್ಲೆಗಳು ಆಗಬೇಕೆಂದು ಇತ್ತು. ಈ ವಿಚಾರ ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತಿದೆ. ಆದರೆ ಹಣದ ಕೊರತೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ 8 ಹೊಸ ಜಿಲ್ಲೆಗಳನ್ನು ಮಾಡುವುದಕ್ಕಾಗುವುದಿಲ್ಲ, ನಾಲ್ಕಾರು ಹೊಸ ಜಿಲ್ಲೆಗಳನ್ನು ರಚಿಸಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿಯವರು ಶಿಫಾರಸ್ಸು ಮಾಡಿದ್ದಾರೆ. ಅದನ್ನು

ಸಚಿವ ಸಂಪುಟ ಇನ್ನೂ ಒಪ್ಪಿಲ್ಲ. ಈ ಬಗ್ಗೆ ಸಚಿವಸಂಪುಟದ ನಿರ್ಣಯವಾದ ಮೇಲೆ ಯಾವ ಜಿಲ್ಲೆಗಳನ್ನು ಪುನರ್ ರಚಿಸಬೇಕೆಂಬ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಇದಲ್ಲದೆ ವಿಜಯನಗರ ಜಿಲ್ಲೆ ಎಂಬ ಹೊಸ ಜಿಲ್ಲೆಯನ್ನು ರಚನೆ ಮಾಡಬೇಕೆಂಬ ಬಗ್ಗೆ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳ ಕೆಲವು ಭಾಗಗಳಿಂದ ಸಾರ್ವಜನಿಕರ ಒತ್ತಡ ಸರಕಾರಕ್ಕೆ ಬಂದಿದೆಯೆ? ಹಾಗೇನಾದರೂ ಬಂದಿದ್ದರೆ ಆ ಬಗ್ಗೆ ಸರಕಾರದ ತೀರ್ಮಾನವೇನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನಾನು ಹೇಳಿದಂತೆ, ಈಗಾಗಲೇ ಬಂದಿದೆ, ಇಲ್ಲ ಎಂದಲ್ಲ ಆದರೆ ಇನ್ನೂ ತೀರ್ಮಾನ ತಗೆದುಕೊಂಡಿಲ್ಲ. ತೀರ್ಮಾನ ತೆಗೆದುಕೊಳ್ಳುವಾಗ ಅದನ್ನು ಕೂಡ ಗಣನೆಗೆ ತೆಗೆದುಕೊಂಡು ಸರ್ಕಾರ ತೀರ್ಮಾನಿಸುತ್ತದೆ.

ಶ್ರೀ ಡಿ.ಬಿ.ಚಂದ್ರೇಗೌಡ : ಈ ದೇಶದಲ್ಲಿ ಶಾಸನಸಭೆಗಳು, ಸಂಸತ್ತುಗಳು ಸಬ್ ಕಮಿಟಿಗಳು ಶಾಶ್ವತವಲ್ಲ. ಆದ್ದರಿಂದ ನಿಮ್ಮ ಅವಧಿ ಮುಗಿಯುದರೊಳಗೆ ತೀರ್ಮನ ತೆಗೆದುಕೊಳ್ಳುತ್ತೀರಾ, ಯಾವಾಗ ಮಾಡುತ್ತೀರಿ ಹೇಳಿ.

ಅಧ್ಯಕ್ಷರು : ಸಂಸತ್ತೂ ಶಾಶ್ವತ, ಶಾಸನಸಭೆಗಳೂ ಶಾಶ್ವತವೇ ಆದರೆ ಅವುಗಳ ಪ್ರತಿನಿಧಿ ಮಾತ್ರ ಬದಲಾಗುತ್ತಾರೆ.

ಶ್ರೀ ಡಿ.ಬಿ.ಚಂದ್ರೇಗೌಡ : ಇವರ ಅವಧಿ ಮುಗಿಯುವುದರೊಳಗೆ ತೀರ್ಮಾನ ಮಾಡುತ್ತೀರಾ?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಆದಷ್ಟು ಬೇಗ ಎಂದು ಹೇಳಿದ್ದೇನೆ ಏಕೆಂದರೆ ಸಬ್ ಕಮಿಟಿ ಮಾಡಿದ ಉದ್ದೇಶವೇ ಆದಷ್ಟು ಬೇಗ ಮಾಡಬೇಕೆಂಬುದು ಆದರೆ ಸ್ವಲ್ಪ ಹಣಕಾಸಿನ ಕೊರತೆಯ ಕಾರಣದಿಂದ ಈ ವರ್ಷ ತೆಗೆದುಕೊಳ್ಳಲು ಆಗಲಿಲ್ಲ. ಆದಷ್ಟು ಬೇಗ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಉಪಸಮಿತಿಯಲ್ಲಿ 4 ಜಿಲ್ಲೆಗಳನ್ನು ಗುರ್ತಿಸಲಾಗಿದೆ ಎಂದು ಹೇಳಿದಿರಿ, ಆ ಜಿಲ್ಲೆಗಳು ಯಾವುವು? ಅದರಲ್ಲಿ ಚಾಮರಾಜನಗರ ತಾಲ್ಲೂಕು ಒಂದು ಜಿಲ್ಲೆ ಆಗುತ್ತದೆ ಎಂದು ಆಸೆಯಿಟ್ಟುಕೊಂಡಿದ್ದೇವೆ, ಅದನ್ನು ಗುರ್ತಿಸಿದ್ದೀರಾ? ಅದನ್ನು ಮೊದಲನೇ ಜಿಲ್ಲೆಯಾಗಿ, ಗಡಿ ಜಿಲ್ಲೆಯಾಗಿ ಮಾಡುತ್ತೀರಾ?

ಶ್ರೀ ಹೆಚ್.ವಿಕಾಂತಯ್ಯ : ಹಿಂದಿನ ರೆವಿನ್ಯೂ ಸಚಿವರು, ಹಾಲಿ ರೆವಿನ್ಯೂ ಸಚಿವರು ಶ್ರೀ ವಾಟಾಳ್ ನಾಗರಾಜ್‌ರವರ ಕ್ಷೇತ್ರವಾದ ಚಾಮರಾಜ ನಗರಕ್ಕೆ ಮಾತ್ರ ಇದು ಸೀಮಿತವಾಗಿದೆಯೇ ಅಥಾವಾ ಅದನ್ನು ಹೊರತು ಪಡಿಸಿ ಇನ್ನೂ ಯಾವುದಾದರೂ ಸೇರಿದೆಯೋ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಿಪೋರ್ಟ್ ಪ್ರಕಾರ ಎಲ್ಲಾ ಜಿಲ್ಲೆಗಳನ್ನೂ ತಗೆದುಕೊಳ್ಳಬೇಕೆಂದು ಗಮನದಲ್ಲಿದ್ದರೂ ಇಂದಿನ ಹಣದ ಕೊರತೆ ಕಾರಣ ಹಂತಹಂತವಾಗಿ ತೆಗೆದುಕೊಳ್ಳಲೆಂದು ಸಬ್‌ಕಮಿಟಿ ಒಪಿನಿಯನ್ ಇದೆ. ಆದರೆ ಕ್ಯಾಬಿನೆಟ್ ಇನ್ನೂ ಫೈನಲ್ ತೀರ್ಮಾನ ತೆಗೆದುಕೊಂಡಿಲ್ಲ. ತೆಗೆದುಕೊಂಡರೆ ಚಾಮರಾಜನಗರವೂ ಆಗಬಹುದು, ದಾವಣಗೆರೆ ಆಗಬಹುದು ಯಾದ್‌ಗೀರ್ ಆಗಬಹುದು ಗದಗ್ ಆಗಬಹುದು ಉಡುಪಿ ಅಥವಾ ಬಾಗಲಕೋಟೆ ಬೇಕಾದರೂ ಆಗಬಹುದು.

ಶ್ರೀ ವಾಟಾಳ್ ನಾಗರಾಜ್ : ಉಪಸಮಿತಿಯವರು ಯಾವ್ಯಾವ ಜಿಲ್ಲೆಯೆಂದು ವರದಿ ಕೊಟ್ಟಿದ್ದಾರೆ ಅದು, ಪತ್ರಿಕೆಯಲ್ಲಿ ಬಂದಿದೆ. ಉಪಸಮಿತಿ ಸಂಹಾರ ಸಮಿತಿಯಾಗಬಾರದು, ಉಪಹಾರ ಸಮಿತಿಯಾಗಬಾರದು.

ಅಧ್ಯಕ್ಷರು : ಈ ವರದಿ ಉಪಸಮಿತಿಯ ಪರಿಶೀಲನೆಗೆ ಒಳಪಟ್ಟಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಚೆಗೆ ಶಹಾಪುರ ತಾಲ್ಲೂಕಿನಿಂದ ಅಲ್ಲಿನ ಶಾಸಕರು ಮತ್ತು ಮುಖಂಡರು ಇಲ್ಲಿಗೆ ಬಂದು ತಮ್ಮನ್ನು, ಮುಖ್ಯಮಂತ್ರಿಗಳನ್ನೂ ಹಾಗೂ ನಮ್ಮನ್ನೂ ಕಂಡು ಹೋದರು. ಅದು ಒಂದು ಸರ್ಕಾರಿ ಆಜ್ಞೆ ನನಗೆ ತೋರಿಸಿದರು ಅದರಲ್ಲಿ ಉಪಸಮಿತಿ ವರದಿ ಕೊಡುವ ಮುಂಚೆಯೇ ಯಾದ್ಗೀರ್ ಒಂದು ಜಿಲ್ಲೆಯಾಗುವ ರೀತಿಯಲ್ಲಿ ಒಂದು ಆರ್ಡರನ್ನು ಹೊರಡಿಸಿ ಅದನ್ನು ವಿತ್‌ಡ್ರಾ ಮಾಡಿರುವುದು ನಿಜವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇಲ್ಲ ಸಬ್ ಕಮಿಟಿ ರಿಪೋರ್ಟ್ ಇನ್ನೂ ಫೈನಲೈಸಾಗಿಲ್ಲ. ಆದರೆ ಜಿಲ್ಲೆ ಮಾಡಬೇಕೆಂದರೆ ಅವಶ್ಯಕತೆಗಳು ಬೇಡಿಕೆಗಳು, ಸವಲತ್ತುಗಳು, ಸೌಲಭ್ಯಗಳನ್ನು ನಾವು ನೋಡಬೇಕಾಗುವುದು. ಇದು ಒಂದೇ ಕಡೆಯಿಂದಲ್ಲ ಇಡೀ ರಾಜ್ಯದಲ್ಲಿ ತಿರುಗಾಡಿ ಮಾಡಿದ್ದಾರೆ. ಯಾದ್ಗೀರ್ ಒಂದೇ ಪ್ರಶ್ನೆ ಅಲ್ಲ. ಶಹಾಪುರದವರು ನಮಗೂ ಮನವಿ ಪ್ರೆಸೆಂಟ್ ಮಾಡಿದ್ದಾರೆ. ಹುಂಡೇಕಾರ್ ಮತ್ತು ಗದ್ದಿಗೌಡರ ಕಮಿಟಿಗೂ ರೆಪ್ರೆಸೆಂಟ್ ಮಾಡಿದ್ದಾರೆ. ಸುರಪುರದವರೂ ಮಾಡಿದ್ದಾರೆ. ಒಂದೆ ತಾಲ್ಲೂಕಿನವರು ಮಾಡಿದರೆಂದು ಹೇಳಲು ಆಗುವುದಿಲ್ಲ. ಆದ್ದರಿಂದ ಇದನ್ನು ಸಮಗ್ರ ವಿಚಾರ ಮಾಡಿ ಆಮೇಲೆ ತೀರ್ಮಾನ ತೆಗೆದುಕೊಳ್ಳಬೇಕಾಗಿರುವುದರಿಂದ ತಕ್ಷಣ ಯಾವ ತಾಲ್ಲೂಕು ಜಿಲ್ಲೆಯಾಗುತ್ತದೆಂದು ಹೇಳಲು ಬರುವುದಿಲ್ಲ.

ಮಹಿಳೆಯರಿಗಾಗಿ ಕೈಗಾರಿಕಾ ತರಬೇತಿ ಸಂಸ್ಥೆ

528 - ಶ್ರೀ ಎಸ್.ಆರ್. ಮೋರೆ (ಧಾರವಾಡ) : ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಅನೇಕ ಜಿಲ್ಲಾ ಸ್ಥಳಗಳಲ್ಲಿ ಈಗಾಗಲೇ ಸರ್ಕಾರ ಐ.ಟಿ.ಐ.ಮಹಿಳಾ ಸಂಸ್ಥೆಗಳನ್ನು ಮಂಜೂರು ಮಾಡಿರುವುದೆ?*

ಆ) *ಧಾರವಾಡದಲ್ಲಿ ಸರ್ಕಾರಿ ಮಹಿಳಾ ಐ.ಟಿ.ಐ.ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?*

ಇ) *ಹಾಗಿದ್ದಲ್ಲಿ ಸರ್ಕಾರವು ಧಾರವಾಡದಲ್ಲಿ ಮಹಿಳಾ ಐ.ಟಿ.ಐ.ಸ್ಥಾಪಿಸುವ ಬಗ್ಗೆ ಕೈಗೊಂಡ ಕ್ರಮವೇನು?*

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ), ಕಾರ್ಮಿಕ ರಾಜ್ಯ ಸಚಿವರು

ಅ) ಹೌದು

ಆ) ಇಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎಸ್.ಆರ್. ಮೋರೆ : ಮಂತ್ರಿಗಳು ರಾಜ್ಯದ ಅನೇಕ ಜಿಲ್ಲಾಸ್ಥಳಗಳಲ್ಲಿ ಈಗಾಗಲೇ ಸರ್ಕಾರ ಐ.ಟಿ.ಐ. ಮಹಿಳಾ ಸಂಸ್ಥೆಗಳನ್ನು ಮಂಜೂರು ಮಾಡಿದೆ ಎಂದಿದ್ದಾರೆ, ಹಾಗೆ ಯಾವ್ಯಾವ ಜಿಲ್ಲೆಯಲ್ಲಿ ಮಾಡಿದ್ದೀರಿ? ಹಾಗೆಯೇ ಧಾರವಾಡದಲ್ಲಿ ಸರ್ಕಾರಿ ಮಹಿಳಾ ಐ.ಟಿ.ಐ.ಅವಶ್ಯಕತೆ ಇರವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದರೆ ಇಲ್ಲ ಎಂದಿದ್ದಾರೆ. ಮೂರು ತಿಂಗಳ ಹಿಂದೆ ನಾನು ಧಾರವಾಡದ ಮಹಿಳೆಯರ ಬೇಡಿಕೆಯನ್ನು ನನ್ನ ಪತ್ರಕ್ಕೆ ಲಗತ್ತಿಸಿ ಕೊಟ್ಟಿದ್ದೆ. ಹಿಂದೆ ಕೆ.ಹೆಚ್. ಪಾಟೀಲರು ಕಾರ್ಮಿಕ ಮಂತ್ರಿಗಳಾಗಿದ್ದಾಗ ಮನವಿಯನ್ನು ಕೊಟ್ಟಿದ್ದೆ. ಅದರ ಬಗ್ಗೆ ತಾವು ಈಗ ಇಲ್ಲ ಎಂದು ಹೇಳಿದ್ದೀರಿ, ನನಗೆ ಇದರ ಬಗ್ಗೆ ಬಹಳ ಸಂಕೋಚ ಎನಿಸುತ್ತದೆ. ಇದರ ಬಗ್ಗೆ ತಾವು ಹೇಳಿಕೆಯನ್ನು ಕೊಡಬೇಕು.

ಶ್ರೀ ಸಿ.ಎಸ್. ನಾಡಗೌಡ : ಸನ್ಮಾನ್ಯ ಅಧ್ಯಕ್ಷರೇ, ಈಗ ವಿಶ್ವಬ್ಯಾಂಕ್ ಸ್ಕೀಮ್‌ನಲ್ಲಿ ಬಂದದ್ದು 10 ಐ.ಟಿ.ಐ.ಗಳು. ಇರುವಂಥ ಶಾಸಕರಲ್ಲಿ ಕನಿಷ್ಟ ಪಕ್ಷ ಎಲ್ಲರೂ ಸೇರಿದರೆ